ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು):-

ಅ) ಗದಗದಲ್ಲಿ ನಿರ್ಮಾಣಗೊಳ್ಳುತ್ತಿರುವ ಪ್ರಾಚ್ಯವಸ್ತು ಹಾಗೂ ಸಂಗ್ರಹಾಲಯ ಕಟ್ಟಡದ ನೆಲ ಅಂತಸ್ತು ನಿರ್ಮಾಣ ಪೂರ್ಣಗೊಂಡಿದ್ದು, ಇಷ್ಟರಲ್ಲೇ ಸಂಗ್ರಹಾಲಯವು ಉದ್ಘಾಟನೆಗೊಳ್ಳಲಿದೆ. ಕಟ್ಟಡದ 2 ಹಾಗೂ 3ನೇ ಅಂತಸ್ತಿನ ಕೆಲಸ ಕೈಗೊಳ್ಳಲು ಪ್ರಸಕ್ತ ಸಾಲಿನಲ್ಲಿ ಸಾಕಷ್ಟು ಅನುದಾನದ ಕೊರೆತೆಯಿಂದ ಕೆಲಸ ಕೈಗೆತ್ತಿಕೊಳ್ಳಲಾಗಲಿಲ್ಲ ಮುಂದಿನ ಆರ್ಥಿಕ ಸಾಲಿನಲ್ಲಿ ಹಣ ಒದಗಿಸಿಕೊಂಡು ಕಾರ್ಯವನ್ನು ಕೈಗೊಳ್ಳಲಾಗುವುದು.

ಆ) ಕಟ್ಟಡದ ಯೋಜನೆ ರೂಪಿಸುವಾಗ ಒಂದು ಹಾಗೂ ಎರಡನೇ ಅಂತಸ್ತಿನ ನೀಲಿನಕ್ಷೆ ಹಾಗೂ ಅಂದಾಜು ಪತ್ರಿಕೆಗಳನ್ನು ತಯಾರಿಸಿದ್ದು ಸೂಕ್ತ ಅನುದಾನ ಒದಗಿಸಿಕೊಂಡು ಯೋಜನೆಯನ್ನು ಪೂರ್ಣಗೊಳಿಸಲು ಅನುದಾನದ ಮಿತಿಗೊಳಪಟ್ಟ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುವುದು.

ವಿಷಯ:- ಗದಗ್ ಪಟ್ಟಣದ ಪ್ರವಾಸಿ ಕೇಂದ್ರಗಳು.

142(392 (ಎ))

ಶ್ರೀ ಆರ್. ಪಾಟೀಲ್ (ಗದಗ್):- ಮಾನ್ಯ ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ಗದಗ್ ಪಟ್ಟಣ ಪ್ರವಾಸಿ ಆಕರ್ಷಣೆ ಕೇಂದ್ರಗಳಾದ ಲಕ್ಕುಂಡಿ, ಡಂಬಳ, ಮುಳಗುಂಡ, ಮೊದಲಾದವುಗಳಿಂದ ಸುತ್ತುವರೆದಿದ್ದು, ಇಲ್ಲಿ ಪ್ರಾಣಿ ಸಂಗ್ರಹಾಲಯವು ಇದೆ. ಇದಕ್ಕಾಗಿ ಪ್ರವಾಸೋದ್ಯಮ ಇಲಾಖೆ ಪ್ರವಾಸಿಗಳ ಅನುಕೂಲಕ್ಕೆ ಸೌಲಭ್ಯಗಳನ್ನು ಸೃಷ್ಠಿಸಲು ಹಾಗೂ ಇಲಾಖೆ ಕಛೇರಿ ಹೊಂದಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು):-

ಆ) ಹೌದು. ಪ್ರವಾಸೋದ್ಯಮ ಇಲಾಖೆಯು ಒಂದು ಪ್ರವಾಸಿ ಮಾಹಿತಿ ಕೇಂದ್ರವನ್ನು ಗದಗ್‌ನಲ್ಲಿ ತೆರೆದಿದೆ.

ವಿಷಯ:- ಗದಗ್‌ನಲ್ಲಿ ವಾರ್ತಾ ಹಾಗೂ ಪ್ರಚಾರ ಇಲಾಖೆಯ ಸಹಾಯಕ ನಿರ್ದೇಶಕರ ಕಛೇರಿಯ ಪ್ರಾರಂಭ.

143(393)

ಶ್ರೀ ಡಿ.ಆರ್. ಪಾಟೀಲ್ (ಗದಗ್):- ಮಾನ್ಯ ಕಾನೂನು ವಾರ್ತಾ ಮತ್ತು ಪ್ರಚಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ಬಹುಕಾಲದಿಂದ ಧಾರವಾಡ ಜಿಲ್ಲಾ ಗದಗದಲ್ಲಿ ವಾರ್ತಾ ಹಾಗೂ ಪ್ರಚಾರ ಇಲಾಖೆಯ ಸಹಾಯಕ ನಿರ್ದೇಶಕರ ಕಛೇರಿ ಪ್ರಾರಂಭಿಸುವ ಪ್ರಸ್ತಾವನೆ ಸರಕಾರದ ಪರಿಶೀಲನೆಯಲ್ಲಿರುವುದು ನಿಜವಲ್ಲವೇ;

ಆ) ಈ ಕಛೇರಿಯನ್ನು ಯಾವಾಗ ಆರಂಭಿಸಲಾಗುವುದು;

ಇ) ರಾಜ್ಯದಲ್ಲಿ ವಾರ್ತಾ ಹಾಗೂ ಪ್ರಚಾರ ಇಲಾಖೆ ಹೊಂದಿರುವ ಒಟ್ಟು ಕಛೇರಿಗಳೆಷ್ಟು? (ಜಿಲ್ಲಾವಾರು ವಿವರ ನೀಡುವುದು)

ಶ್ರೀ ಯಂ.ಸಿ. ನಾಣಯ್ಯ (ಕಾನೂನು ವಾರ್ತಾ ಮತ್ತು ಪ್ರಚಾರ ಸಚಿವರು):-

ಅ) ನಿಜ.

ಆ) ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಒಟ್ಟು 45.

ಜಿಲ್ಲಾವಾರು ಕಛೇರಿಗಳ ವಿವರ ಕೆಳಕಂಡಂತಿದೆ:-

1. ಬೆಂಗಳೂರು ಜಿಲ್ಲೆ

1. ಕೇಂದ್ರ ಕಛೇರಿ, ಬೆಂಗಳೂರು.
2. ಉಪನಿರ್ದೇಶಕರ ಕಛೇರಿ, ಬೆಂಗಳೂರು ವಿಭಾಗ, ಬೆಂಗಳೂರು.
3. ಜಿಲ್ಲಾ ವಾರ್ತಾ ಮತ್ತು ಪ್ರಚಾರಾಧಿಕಾರಿಗಳ ಕಛೇರಿ, ಬೆಂಗಳೂರು ಜಿಲ್ಲೆ, ಬೆಂಗಳೂರು.
4. ಜಿಲ್ಲಾ ವಾರ್ತಾ ಮತ್ತು ಪ್ರಚಾರಾಧಿಕಾರಿಗಳ ಕಛೇರಿ, ಬೆಂಗಳೂರು (ಗ್ರಾ), ಬೆಂಗಳೂರು.
5. ಸಹಾಯಕ ನಿರ್ದೇಶಕರ ಕಛೇರಿ, ರಾಜ್ಯ ವಾರ್ತಾ ಕೇಂದ್ರ, ಬೆಂಗಳೂರು.

2. ಕೋಲಾರ ಜಿಲ್ಲೆ

1. ಜಿಲ್ಲಾ ವಾರ್ತಾ ಮತ್ತು ಪ್ರಚಾರಾಧಿಕರಿಗಳ ಕಛೇರಿ, ಕೋಲಾರ ಜಿಲ್ಲೆ, ಕೋಲಾರ.
2. ಸಹಾಯಕ ನಿರ್ದೇಶಕರ ಕಛೇರಿ, ಚಿಕ್ಕಬಳ್ಳಾಪುರ.

3. ತುಮಕೂರು ಜಿಲ್ಲೆ

1. ಜಿಲ್ಲಾ ವಾರ್ತಾ ಮತ್ತು ಪ್ರಚಾರಾಧಿಕಾರಿಗಳ ಕಛೇರಿ, ತುಮಕೂರು ಜಿಲ್ಲೆ, ತುಮಕೂರು.
2. ಸಹಾಯಕ ನಿರ್ದೇಶಕರ ಕಛೇರಿ, ಮಧುಗಿರಿ.

4. ಚಿತ್ರದುರ್ಗ ಜಿಲ್ಲೆ

1. ಜಿಲ್ಲಾ ವಾರ್ತಾ ಮತ್ತು ಪ್ರಚಾರಾಧಿಕಾರಿಗಳ ಕಛೇರಿ, ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ.
2. ಸಹಾಯಕ ನಿರ್ದೇಶಕರ ಕಛೇರಿ, ದಾವಣಗೆರೆ.

5. ಶಿವಮೊಗ್ಗ ಜಿಲ್ಲೆ

1. ಜಿಲ್ಲಾ ವಾರ್ತಾ ಮತ್ತು ಪ್ರಚಾರಾಧಿಕಾರಿಗಳ ಕಛೇರಿ, ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ.
2. ಸಹಾಯಕ ನಿರ್ದೇಶಕರ ಕಛೇರಿ, ಸಾಗರ.

6. ಮೈಸೂರು ಜಿಲ್ಲೆ

1. ಜಂಟಿ ನಿರ್ದೇಶಕರ ಕಛೇರಿ, ದಕ್ಷಿಣ ವಲಯ, ಮೈಸೂರು.
2. ಉಪನಿರ್ದೇಶಕರ ಕಛೇರಿ, ಮೈಸೂರು ವಿಭಾಗ, ಮೈಸೂರು.
3. ಜಿಲ್ಲಾ ವಾರ್ತಾ ಮತ್ತು ಪ್ರಚಾರಾಧಿಕಾರಿಗಳ ಕಛೇರಿ, ಮೈಸೂರು ಜಿಲ್ಲೆ, ಮೈಸೂರು.
4. ಸಹಾಯಕ ನಿರ್ದೇಶಕರ ಕಛೇರಿ, ನಂಜನಗೂಡು.

7. ಮಂಡ್ಯ ಜಿಲ್ಲೆ

1. ಜಿಲ್ಲಾ ವಾರ್ತಾ ಮತ್ತು ಪ್ರಚಾರಾಧಿಕಾರಿಗಳ ಕಛೇರಿ, ಮಂಡ್ಯ ಜಿಲ್ಲೆ, ಮಂಡ್ಯ.
2. ಸಹಾಯಕ ನಿರ್ದೇಶಕರ ಕಛೇರಿ, ಪಾಂಡವಪುರ.

8. ಕೊಡಗು ಜಿಲ್ಲೆ

1. ಜಿಲ್ಲಾ ವಾರ್ತಾ ಮತ್ತು ಪ್ರಚಾರಾಧಿಕಾರಿಗಳ ಕಛೇರಿ, ಕೊಡಗು ಜಿಲ್ಲೆ, ಮಡಿಕೇರಿ.

9. ದಕ್ಷಿಣ ಕನ್ನಡ ಜಿಲ್ಲೆ

1. ಜಿಲ್ಲಾ ವಾರ್ತಾ ಮತ್ತು ಪ್ರಚಾರಾಧಿಕಾರಿಗಳ ಕಛೇರಿ, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.
2. ಸಹಾಯಕ ನಿರ್ದೇಶಕರ ಕಛೇರಿ, ಪುತ್ತೂರು.

10. ಚಿಕ್ಕಮಗಳೂರು ಜಿಲ್ಲೆ

1. ಜಿಲ್ಲಾ ವಾರ್ತಾ ಮತ್ತು ಪ್ರಚಾರಾಧಿಕಾರಿಗಳ ಕಛೇರಿ, ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು.
2. ಸಹಾಯಕ ನಿರ್ದೇಶಕರ ಕಛೇರಿ, ತರೀಕೆರೆ.

11. ಹಾಸನ ಜಿಲ್ಲೆ

1. ಜಿಲ್ಲಾ ವಾರ್ತಾ ಮತ್ತು ಪ್ರಚಾರಾಧಿಕಾರಿಗಳ ಕಛೇರಿ, ಹಾಸನ ಜಿಲ್ಲೆ, ಹಾಸನ.
2. ಸಹಾಯಕ ನಿರ್ದೇಶಕರ ಕಛೇರಿ, ಸಕಲೇಶಪುರ.

12. ಬೆಳಗಾವಿ ಜಿಲ್ಲೆ

1. ಜಂಟಿ ನಿರ್ದೇಶಕರ ಕಛೇರಿ, ಉತ್ತರ ವಲಯ, ಬೆಳಗಾವಿ.
2. ಉಪನಿರ್ದೇಶಕರ ಕಛೇರಿ, ಬೆಳಗಾವಿ ವಿಭಾಗ, ಬೆಳಗಾವಿ.
3. ಜಿಲ್ಲಾ ವಾರ್ತಾ ಮತ್ತು ಪ್ರಚಾರಾಧಿಕಾರಿಗಳ ಕಛೇರಿ, ಬೆಳಗಾವಿ ಜಿಲ್ಲೆ, ಬೆಳಗಾವಿ.
4. ಸಹಾಯಕ ನಿರ್ದೇಶಕರ ಕಛೇರಿ, ಚಿಕ್ಕೋಡಿ.

13. ಧಾರವಾಡ ಜಿಲ್ಲೆ

1. ಜಿಲ್ಲಾ ವಾರ್ತಾ ಮತ್ತು ಪ್ರಚಾರಾಧಿಕಾರಿಗಳ ಕಛೇರಿ, ಧಾರವಾಡ ಜಿಲ್ಲೆ, ಧಾರವಾಡ.
2. ಸಹಾಯಕ ನಿರ್ದೇಶಕರ ಕಛೇರಿ, ಹಾವೇರಿ.
3. ಸಹಾಯಕ ನಿರ್ದೇಶಕರ ಕಛೇರಿ, ರಾಜ್ಯ ವಾರ್ತಾ ಕೇಂದ್ರ, ಹುಬ್ಬಳ್ಳಿ.

14. ಉತ್ತರ ಕನ್ನಡ ಜಿಲ್ಲೆ

1. ಜಿಲ್ಲಾ ವಾರ್ತಾ ಮತ್ತು ಪ್ರಚಾರಾಧಿಕಾರಿಗಳ ಕಛೇರಿ, ಉತ್ತರ ಕನ್ನಡ ಜಿಲ್ಲೆ ಕಾರವಾರ.
2. ಸಹಾಯಕ ನಿರ್ದೇಶಕರ ಕಛೇರಿ, ಶಿರಸಿ.

15. ಬಿಜಾಪುರ ಜಿಲ್ಲೆ

1. ಜಿಲ್ಲಾ ವಾರ್ತಾ ಮತ್ತು ಪ್ರಚಾರಾಧಿಕಾರಿಗಳ ಕಛೇರಿ, ಬಿಜಾಪುರ ಜಿಲ್ಲೆ, ಬಿಜಾಪುರ.
2. ಸಹಾಯಕ ನಿರ್ದೇಶಕರ ಕಛೇರಿ, ಬಾಗಲಕೋಟೆ.

16. ಗುಲ್ಬರ್ಗಾ ಜಿಲ್ಲೆ

1. ಉಪನಿರ್ದೇಶಕರ ಕಛೇರಿ, ಗುಲ್ಬರ್ಗಾ ವಿಭಾಗ, ಗುಲ್ಬರ್ಗಾ.
2. ಜಿಲ್ಲಾ ವಾರ್ತಾ ಮತ್ತು ಪ್ರಚಾರಾಧಿಕಾರಿಗಳ ಕಛೇರಿ, ಗುಲ್ಬರ್ಗ ಜಿಲ್ಲೆ ಗುಲ್ಬರ್ಗ.
3. ಸಹಾಯಕ ನಿರ್ದೇಶಕರ ಕಛೇರಿ, ಯಾದಗಿರಿ.

17. ಬಳ್ಳಾರಿ ಜಿಲ್ಲೆ

1. ಜಿಲ್ಲಾ ವಾರ್ತಾ ಮತ್ತು ಪ್ರಚಾರಾಧಿಕಾರಿಗಳ ಕಛೇರಿ, ಬಳ್ಳಾರಿ ಜಿಲ್ಲೆ, ಬಳ್ಳಾರಿ.
2. ಸಹಾಯಕ ನಿರ್ದೇಶಕರ ಕಛೇರಿ, ಹೊಸಪೇಟೆ.

18. ರಾಯಚೂರು ಜಿಲ್ಲೆ

1. ಜಿಲ್ಲಾ ವಾರ್ತಾ ಮತ್ತು ಪ್ರಚಾರಾಧಿಕಾರಿಗಳ ಕಛೇರಿ, ರಾಯಚೂರು ಜಿಲ್ಲೆ, ರಾಯಚೂರು.
2. ಸಹಾಯಕ ನಿರ್ದೇಶಕರ ಕಛೇರಿ, ಕೊಪ್ಪಳ.

19. ಬೀದರ್ ಜಿಲ್ಲೆ

1. ಜಿಲ್ಲಾ ವಾರ್ತಾ ಮತ್ತು ಪ್ರಚಾರಾಧಿಕಾರಿಗಳ ಕಛೇರಿ, ಬೀದರ್ ಜಿಲ್ಲೆ, ಬೀದರ್.

ವಿಷಯ:- ಹಣಕಾಸು ವರ್ಷಗಳಲ್ಲಿ ವಿಧಾನಸಭೆ ಅನುಮೋದಿಸಿದ ಯೋಜನಾ ವೆಚ್ಚ.

144(394)

ಶ್ರೀ ಡಿ.ಆರ್. ಪಾಟೀಲ್ (ಗದಗ್):- ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) 1995-96 ಹಾಗೂ 1996-97ನೇ ಹಣಕಾಸು ವರ್ಷಗಳಲ್ಲಿ ವಿಧಾನ ಸಭೆ ಅನುಮೋದಿಸಿದ ಯೋಜನಾ ವೆಚ್ಚವೆಷ್ಟು;

ಆ) 1995-96ನೇ ಸಾಲಿನಲ್ಲಿ ಅನುಮೋದನೆಗೊಳಗಾದ ಯೋಜನೆಗಳ ಅನುಷ್ಠಾನಕ್ಕಾಗಿ ಖರ್ಚಾದ ಹಣವೆಷ್ಟು;

ಇ) ಈ ಯೋಜನೆಗಳಲ್ಲಿ ಕಡಿತ ಮಾಡಲಾದ ಹಣವೆಷ್ಟು; (ಇಲಾಖಾವಾರು ಮಾಹಿತಿ ನೀಡುವುದು)

ಈ) 1996-97ನೇ ಸಾಲಿನಲ್ಲಿ ವಿಧಾನ ಮಂಡಲದಲ್ಲಿ ಅನುಮೋದಿತವಾದ ಯೋಜನೆಗಳಲ್ಲಿ ಆದ ಕಡಿತವೆಷ್ಟು; (ಇಲಾಖಾವಾರು ಮಾಹಿತಿ ನೀಡುವುದು)

ಉ) ಇನ್ನು ಮುಂದೆ ಅನುಮೋದಿತ ಯೋಜನಾ ವೆಚ್ಚದಲ್ಲಿ ಕಡತಿವಾಗದ ಹಾಗೆ ಸರ್ಕಾರದವರು ಕ್ರಮ ಕೈಗೊಳ್ಳುವರೇ;

ಊ) ಯೋಜನಾ ವೆಚ್ಚದಲ್ಲಿ ಕಡಿತಮಾಡುವುದು ಅನಿವಾರ್ಯವಾದರೆ ಕಡಿತ ಮಾಡುವ ಪೂರ್ವದಲ್ಲಿ ಯೋಜನೆಗಳಿಗೆ ಆದ್ಯತೆಯನ್ವಯ ಕಡಿತ ಮಾಡಲು ವಿಧಾನ ಮಂಡಲದ ಆದೇಶ ಪಡೆಯುವುದರಲ್ಲಿ ಇರುವ ತೊಂದರೆ ಏನು?

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯ ಮಂತ್ರಿಗಳು):-

ಅ) ವಿಧಾನ ಮಂಡಲವು ಅನುಮತಿಸಿದ ಯೋಜನೆಯ ಭಾಗವನ್ನು ತೆಗೆದುಕೊಳ್ಳಲಾಗಿದೆ.